KACM510002132025

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ , ನ.ರಾ.ಪುರ

ಸಿ ಸಿ ನಂ.**22/2025**

| | | |
|---|---|---|
| ಫಿರ್ಯಾದಿ | ಃ | ಸರ್ಕಾರ (ಎನ್ ಆರ್ ಪುರ ಪೊಲೀಸರಿಂದ) |
| | | ವಿರುದ್ಧ |
| ಆರೋಪಿತರು | ಃ | ಮಹಮದ್ ಅನೀಸ್, ಬಿನ್ ಅಬೂಬಕ್ಕರ್,<br>25 ವರ್ಷ, ಚಾಲಕ ವೃತ್ತಿ,,<br>ವಾಸಃ ರಾಘವೇಂದ್ರನಗರ,<br>ಅರಂದೂರು ಗ್ರಾಮ, ಕೊಪ್ಪ . |

ಭಾರತೀಯ ನಾಗರಿಕ ಸುರಕ್ಷಾ ಸಂಹಿತ ಕಲಂ **351** ರ ಪ್ರಕಾರ ಆರೋಪಿಯ ಹೇಳಿಕೆ

ಪ್ರಶ್ನೆ : 1 ಅಭಿಯೋಜನೆಯ ಪರ ಸಾಕ್ಷಿದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆ : 2 ಪ್ರಾಸಾ 1 ಗೋಪಾಲ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 19.12.2024 ರಂದು ತಮ್ಮ ಮಗ ಹಾಗೂ ಸಜೇಶ್ ಇವರು ಎನ್.ಆರ್.ಪುರಕ್ಕೆ ಅಲ್ಯೂಮಿನಿಯಂ ಕೆಲಸ ಮುಗಿಸಿ ಮದ್ಯಾಹ್ನ 2-30 ಗಂಟೆಗೆ ಊಟಕ್ಕೆ ಬರುವಾಗ ತಮ್ಮ ಮನೆಯ ಮುಂದಿನ ರಸ್ತೆಯಲ್ಲಿ ಕೊಪ್ಪದಿಂದ ಎನ್.ಆರ್.ಪುರಕ್ಕೆ ಬರುತ್ತಿದ್ದ ಕಾರು ತಮ್ಮ ಮಗ ಹಾಗೂ ಸಜೇಶ್ ಈತನಿಗೆ ಡಿಕ್ಕಿಪಡಿಸಿರುತ್ತಾರೆ ಎಂದು ಅವರ ಹೆಂಡತಿ ಫೋನ್ ಮಾಡಿ ತಿಳಿಸಿದಾಗ ತಾವು ಬಂದು ನೋಡಲಾಗಿ ಸಜೇಶನ ತಲೆಗೆ, ಕಾಲಿಗೆ ರಕ್ತಗಾಯವಾಗಿದ್ದು, ತಮ್ಮ ಮಗನ ಬಲಗಾಲು ಮತ್ತು ತಲೆಗೆ ರಕ್ತಗಾಯವಾಗಿದ್ದು, ಅವರನ್ನು ಎನ್.ಆರ್.ಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಮಣಿಪಾಲ್ ಆಸ್ಪತ್ರೆಗೆ ಸಜೇಶ್ ಈತನನ್ನು ಕರೆದುಕೊಂಡು ಹೋಗುತ್ತಿರುವಾಗ ಹರಿಹರಪುರದ ಹತ್ತಿರ ಸಂಜೆ 4-30 ಗಂಟೆಗೆ ತೀರಿಕೊಂಡಿದ್ದು, ನಂತರ ಎನ್.ಆರ್.ಪುರ ಸರ್ಕಾರಿ ಆಸ್ಪತ್ರೆಯಲ್ಲಿ ಶವ ತನಿಖೆ ಮಾಡಿದ ಬಗ್ಗೆ ಆ ಸಂಬಂಧ ತಾವು ಪೊಲೀಸ್ ಠಾಣೆಗೆ ದೂರು ಕೊಟ್ಟಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ

ಪ್ರಶ್ನೆ : 3 ಪ್ರಾಸಾ 2 ಸಾಜು ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 22.12.2024 ರಂದು ಸುತ್ತಾ - ಶೆಟ್ಟಿಕೊಪ್ಪ ರಸ್ತೆಯ ಗುಬ್ಬಿಗಾ ಗ್ರಾಮದ ಬಳಿ ಅಪಘಾತದ ಹಿನ್ನೆಲೆಯಲ್ಲಿ ಅರ್ಚನ

ಇವರು ತೋರಿಸಿದ ಸ್ಥಳದಲ್ಲಿ ತಮ್ಮ ಮತ್ತು ಚಾಸಾ-8 ರವರ ಸಮಕ್ಷಮ ಪೊಲೀಸರು ಬೆಳಿಗ್ಗೆ 11-30 ರಿಂದ 12-30 ರ ವರೆಗೆ ಪಂಚನಾಮೆ ಮಾಡಿ ಆ ಕಾಲಕ್ಕೆ ಹೆಲ್ಮೆಟ್, ಸ್ಕೂಟಿಯ ಮಾಸ್ಕ್ ಪೀಸ್ ಹಾಗೂ ಕೆಂಪು ಬಣ್ಣದ ಬಿಡಿ ಭಾಗವನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡು ಭಾವಚಿತ್ರ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :4 ಪ್ರಾಸಾ 2 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಮದ್ಯಾಹ್ನ 1-00 ಗಂಟೆಯಿಂದ 2-00 ಗಂಟೆ ಅವಧಿಯಲ್ಲಿ ಎನ್.ಆರ್.ಪುರ ಪೊಲೀಸ್ ಠಾಣಾ ಆವರಣದಲ್ಲಿ ತಮ್ಮ ಮತ್ತು ಚಾಸಾ-8 ರವರ ಸಮಕ್ಷಮ ಪೊಲೀಸರು ಅಮಾನತು ಪಂಚನಾಮೆ ಮಾಡಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :5 ಪ್ರಾಸಾ 3 ಅಭಿಷೇಕ್ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 19.12.2024 ರಂದು ತಾವು ಮತ್ತು ಸಜೇಶ್ ಇವರು ಎನ್.ಆರ್.ಪುರಕ್ಕೆ ಅಲ್ಯೂಮಿನಿಯಂ ಕೆಲಸ ಮುಗಿಸಿ ಮದ್ಯಾಹ್ನ 2-30 ಗಂಟೆಗೆ ಊಟಕ್ಕೆ ಬರುವಾಗ ತಮ್ಮ ಮನೆಯ ಮುಂದಿನ ರಸ್ತೆಯಲ್ಲಿ ಕೊಪ್ಪದಿಂದ ಎನ್.ಆರ್.ಪುರಕ್ಕೆ ಬರುತ್ತಿದ್ದ ಕಾರು ತಮ್ಮ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಸಜೇಶನ ತಲೆಗೆ, ಕಾಲಿಗೆ ರಕ್ತಗಾಯವಾಗಿದ್ದು, ತನಗೆ ಬಲಗಾಲು ಮತ್ತು ತಲೆಗೆ ರಕ್ತಗಾಯವಾಗಿದ್ದು, ಅವರನ್ನು ಎನ್.ಆರ್.ಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಮಣಿಪಾಲ್ ಆಸ್ಪತ್ರೆಗೆ ಸಜೇಶ್ ಈತನನ್ನು ಕರೆದುಕೊಂಡು ಹೋಗುತ್ತಿರುವಾಗ ಹರಿಹರಪುರದ ಹತ್ತಿರ ಸಂಜೆ 4-30 ಗಂಟೆಗೆ ತೀರಿಕೊಂಡಿದ್ದು, ಈ ಸಂಬಂಧ ತಾವು ಪೊಲೀಸರಿಗೆ ದೂರು ಕೊಟ್ಟಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 7 ಪ್ರಾಸಾ 4 ಚಂದ್ರವತಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 19.12.2024 ರಂದು ತಮ್ಮ ಮಗ ಹಾಗೂ ತಂಗಿಯ ಮಗ ಎನ್.ಆರ್.ಪುರಕ್ಕೆ ಅಲ್ಯೂಮಿನಿಯಂ ಕೆಲಸ ಮುಗಿಸಿ ಮದ್ಯಾಹ್ನ 2-30 ಗಂಟೆಗೆ ಊಟಕ್ಕೆ ಬರುವಾಗ ತಮ್ಮ ಮನೆಯ ಮುಂದಿನ ರಸ್ತೆಯಲ್ಲಿ ಕೊಪ್ಪದಿಂದ ಎನ್.ಆರ್.ಪುರಕ್ಕೆ ಬರುತ್ತಿದ್ದ ಕಾರು ಅವರ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಸಜೇಶನ ತಲೆಗೆ, ಕಾಲಿಗೆ ರಕ್ತಗಾಯವಾಗಿದ್ದು, ಅಭಿಷೇಕ್ ಈತನ ಬಲಗಾಲು ಮತ್ತು ತಲೆಗೆ ರಕ್ತಗಾಯವಾಗಿದ್ದು, ಅವರನ್ನು ಎನ್.ಆರ್.ಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಮಣಿಪಾಲ್ ಆಸ್ಪತ್ರೆಗೆ ಸಜೇಶ್ ಈತನನ್ನು

ಕರೆದುಕೊಂಡು ಹೋಗುತ್ತಿರುವಾಗ ಹರಿಹರಪುರದ ಹತ್ತಿರ ತೀರಿಕೊಂಡಿದ್ದು, ಆ ಸಂಬಂಧ ತಾವು ಪೊಲೀಸರಿಗೆ ಹೇಳಿಕೆ ಕೊಟ್ಟಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 8 ಪ್ರಾಸಾ 5 ಅರ್ಚನ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 19.12.2024 ರಂದು ತಮ್ಮ ತಮ್ಮ ಹಾಗೂ ಚಿಕ್ಕಮ್ಮನ ಮಗ ಎನ್.ಆರ್.ಪುರಕ್ಕೆ ಅಲ್ಯೂಮಿನಿಯಂ ಕೆಲಸ ಮುಗಿಸಿ ಮದ್ಯಾಹ್ನ 2-30 ಗಂಟೆಗೆ ಊಟಕ್ಕೆ ಬರುವಾಗ ತಮ್ಮ ಮನೆಯ ಮುಂದಿನ ರಸ್ತೆಯಲ್ಲಿ ಕೊಪ್ಪದಿಂದ ಎನ್.ಆರ್.ಪುರಕ್ಕೆ ಬರುತ್ತಿದ್ದ ಕಾರು ಅವರ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಸಜೇಶನ ತಲೆಗೆ, ಕಾಲಿಗೆ ರಕ್ತಗಾಯವಾಗಿದ್ದು, ಅಭಿಷೇಕ್ ಈತನ ಬಲಗಾಲು ಮತ್ತು ತಲೆಗೆ ರಕ್ತಗಾಯವಾಗಿದ್ದು, ಅವರನ್ನು ಎನ್.ಆರ್.ಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಮಣಿಪಾಲ್ ಆಸ್ಪತ್ರೆಗೆ ಸಜೇಶ್ ಈತನನ್ನು ಕರೆದುಕೊಂಡು ಹೋಗುತ್ತಿರುವಾಗ ಹರಿಹರಪುರದ ಹತ್ತಿರ ತೀರಿಕೊಂಡಿದ್ದು, ಆ ಸಂಬಂಧ ತಾವು ಪೊಲೀಸರಿಗೆ ಹೇಳಿಕೆ ಕೊಟ್ಟಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 8 ಪ್ರಾಸಾ 5 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 22.12.2024 ರಂದು ತಾವು ತೋರಿಸಿದ ತಮ್ಮ ಮನೆಯ ಮುಂದಿನ ರಸ್ತೆಯಲ್ಲಿ ಪಂಚರ ಸಮಕ್ಷಮ ಪೊಲೀಸರು ಪಂಚನಾಮೆ ಮಾಡಿ ಅಲ್ಲಿ ಬಿದ್ದಿದ್ದ ಬೈಕನ ಮಾಸ್ಕ್, ನಂಬರ್ ಪ್ಲೇಟ್, ಹೆಲ್ಮೆಟನ್ನು ಹಾಗೂ ಕಾರಿನ ಕೆಂಪು ಬಣ್ಣದ ಚೂರನ್ನು ಅಮಾನತುಪಡಿಸಿಕೊಂಡ ಬಗ್ಗೆ ಹಾಗೂ ಈ ಸಂಬಂಧ ಪೊಲೀಸರ ಮುಂದೆ ಹೇಳಿಕೆ ಕೊಟ್ಟ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 8 ಪ್ರಾಸಾ 6 ನಿರಂಜನ್ ಗೌಡ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 19.12.2024 ರಂದು ಸಂಜೆ 5-45 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ತಮ್ಮ ಠಾಣಾ ಗುನ್ನ ಸಂಖ್ಯೆ.113/2024 ರಲ್ಲಿ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ಕಳುಹಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 8 ಪ್ರಾಸಾ 7 ಗುರುದತ್ ಕಾಮತ್ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 19.12.2024 ರಂದು ಈ ಪ್ರಕರಣದ ಕಡತವನ್ನು ಚಾಸಾ-14 ರವರಿಂದ ಪಡೆದುಕೊಂಡು ಅದೇ ದಿನ

KACM510002132025

ರಾತ್ರಿ 8-30 ರಿಂದ 10-30 ರವರೆಗೆ ಎನ್.ಆರ್. ಪುರ ಸರ್ಕಾರಿ ಆಸ್ಪತ್ರೆಯಲ್ಲಿ ಮೃತ ಸಜೇಶ್ ಈತನ ಶವ ತನಿಖೆಯನ್ನು ಚಾಸಾ-4 ಮತ್ತು 7 ರವರ ಸಮಕ್ಷಮ ಜರುಗಿಸಿ ಆ ಕಾಲಕ್ಕೆ ಚಾಸಾ-5 ಮತ್ತು 6 ರವರ ಹೇಳಿಕೆಗಳನ್ನು ಪಡೆದುಕೊಂಡ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 8 ಪ್ರಾಸಾ 7 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 20.12.2024 ರಂದು ಕಲಂ.133 ಮೋಟಾರ್ ವಾಹನ ಕಾಯ್ದೆಯಡಿ ನೋಟೀಸು ಜಾರಿಗೊಳಿಸಿ ಅದೇ ದಿನ ಚಾಸಾ-11 ರವರ ಹೇಳಿಕೆಯನ್ನು ಪಡೆದುಕೊಂಡ ಬಗ್ಗೆ, ದಿನಾಂಕಃ 22.12.2024 ರಂದು ಚಾಸಾ-13 ರವರು ತೋರಿಸಿದ ಸ್ಥಳದಲ್ಲಿ ಚಾಸಾ-7 ಮತ್ತು 8 ರವರ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆ ಮಾಡಿ ಸ್ಕೂಟರ್ ನ ನಂಬರ್ ಪ್ಲೇಟ್, ಮಾಸ್ಕ್ ಪೀಸನ್ನು ಅಮಾನತುಪಡಿಸಿಕೊಂಡ ಬಗ್ಗೆ ಹಾಗೂ ಅದೇ ದಿನ ಪೊಲೀಸ್ ಠಾಣಾ ಆವರಣದಲ್ಲಿ ನಿಂತಿದ್ದ ಕಾರು ಮತ್ತು ಸ್ಕೂಟರನ್ನು ಚಾಸಾ-1 ರವರು ತೋರಿಸಿದ್ದು, ಅವುಗಳನ್ನು ಚಾಸಾ-7 ಮತ್ತು 8 ರವರ ಸಮಕ್ಷಮ ಅಮಾನತು ಮಹಜರು ಮಾಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 8 ಪ್ರಾಸಾ 7 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 22.12.2024 ರಂದು ಚಾಸಾ-12 ಮತ್ತು 13 ರವರ ಹೇಳಿಕೆಗಳನ್ನು ಪಡೆದುಕೊಂಡ ಬಗ್ಗೆ, ಅಪಘಾತಕ್ಕೊಳಗಾದ ವಾಹನಗಳನ್ನು ಪರೀಕ್ಷೆ ಮಾಡಿ ವರದಿ ಮಾಡಿ ವರದಿ ಸಲ್ಲಿಸುವಂತೆ ಚಾಸಾ-10 ರವರಿಗೆ ಕೇಳಿಕೊಂಡ ಬಗ್ಗೆ ದಿನಾಂಕಃ 05.01.2025 ರಂದು ಮೃತರ ಮರಣೋತ್ತರ ಪರೀಕ್ಷಾ ವರದಿಯನ್ನು ಸ್ವೀಕರಿಸಿದ ಬಗ್ಗೆ ದಿನಾಂಕಃ 06.01.2025 ರಂದು ಕಾರನ್ನು ಹಾಗೂ ದಿನಾಂಕಃ 09.02.2025 ರಂದು ಬೈಕನ್ನು ಮಾಲೀಕರಿಗೆ ಇಂಡೆಮ್ನಿಟಿ ಬಾಂಡ್ ಮೇಲೆ ಬಿಡುಗಡೆಗೊಳಿಸಿದ ಬಗ್ಗೆ ದಿನಾಂಕಃ 21.01.2025 ರಂದು ಚಾಸಾ-11 ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡ ಬಗ್ಗೆ ಹಾಗೂ ದಿನಾಂಕಃ 22.02.2025 ರಂದು ಚಾಸಾ-10 ರವರಿಂದ ವಾಹನ ತಪಾಸಣಾ ವರದಿಯನ್ನು ಸ್ವೀಕರಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :9 ನೀವು ಏನಾದರು ಹೇಳುವುದು ಇದೆಯೇ?

ಉತ್ತರಃ ಏನೂ ಇಲ್ಲ

ಪ್ರಶ್ನೆ :10 ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ ?

ಉತ್ತರಃ ಇಲ್ಲ

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗು ಸರಿಯಾಗಿದೆ ಎಂದು ದೃಢಿಕರಿಸಲಾಗಿದೆ.

ದಿನಾಂಕ **19** ನೇ ದಿವಸ ಮೇ ಮಾಹೆ **2026** ನೇ ಇಸವಿ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್‌ಸಿ ನ.ರಾ.ಪುರ.

ಆರೋಪಿಯ ಸಹಿಃ